

ವಿದ್ಯುನ್‌ಗೆ 'ವರ್ಷದ ಯುವ ವನ್ಯಜೀವಿ ಛಾಯಾಗ್ರಾಹಕ' ಪ್ರಶಸ್ತಿ ತಂದುಕೊಟ್ಟ ಛಾಯಾಚಿತ್ರ 'ಡೋಮ್ ಹೋಂ'

# ಛಾಯಾಲೋಕದಲ್ಲಿ ವಿದ್ಯುನ್ ಸಂಚಾರ



**ಹತ್ತರ ಹರೆಯದ ವಿದ್ಯುನ್ ಹೆಬ್ಬಾರ್‌ನ 'ಡೋಮ್ ಹೋಂ' ಹೆಸರಿನ ಜೇಡರ ಬಲೆ ಛಾಯಾಚಿತ್ರಕ್ಕೆ ಲಂಡನ್‌ನ ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂನ 'ವರ್ಷದ ಯುವ ವನ್ಯಜೀವಿ ಛಾಯಾಗ್ರಾಹಕ' ಪ್ರಶಸ್ತಿ ಒಲಿದಿದೆ...**

**■ ಸುಮಲತಾ ಎನ್.**

ಓದಿನ ನಡುವೆ ಒಂದಿಷ್ಟು ಬಿಡುವು ಸಿಕ್ಕಾಗೆಲ್ಲ ಆ ಪುಟಾಣಿಯ ಜೊತೆಯಾಗುತ್ತಿದುದು ಕ್ಯಾಮೆರಾ. ಪಾರ್ಕ್‌ಗಳಲ್ಲಿ, ಮರ ಗಿಡಗಳ ಬಳಿ, ರಸ್ತೆ ಬದಿಗಳಲ್ಲಿ ನಿಂತು ಏನನ್ನೋ ಹುಡುಕುತ್ತಿರುವಂತೆ ಕಾಣುತ್ತಿದ್ದ ವಿದ್ಯುನ್ ಕುತೂಹಲದ ಕಣ್ಣುಗಳಿಗೆ ವಿಶೇಷವಾದ ಜಗತ್ತೇ ತೆರೆದುಕೊಳ್ಳುತ್ತಿತ್ತು. 'ವನ್ಯಜೀವಿ ಛಾಯಾಗ್ರಹಣ' ವಿದ್ಯುನ್ ಕಣ್ಣಿಗೆ ಕಂಡಿದ್ದು ಬೇರೆಯದೇ ರೀತಿಯಲ್ಲಿ.

ನಾಡಿನಲ್ಲಿ, ನಮ್ಮ ನಡುವೆಯೇ ಇರುವ ಜೀವವೈವಿಧ್ಯವನ್ನು ಕ್ರಿಯಾಶೀಲವಾಗಿ ಕ್ಯಾಮೆರಾದಲ್ಲಿ ಸೆರೆಹಿಡಿಯುವ ಪ್ರಯತ್ನ 10 ವರ್ಷದ ವಿದ್ಯುನ್ ಹೆಬ್ಬಾರ್‌ನದ್ದು. ವಿದ್ಯುನ್ ಛಾಯಾಚಿತ್ರವೊಂದಕ್ಕೆ ಈ ಬಾರಿ ಲಂಡನ್‌ನ ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂನಿಂದ ನೀಡಲಾಗುವ ಪ್ರತಿಷ್ಠಿತ 'ವರ್ಷದ ಯುವ ಛಾಯಾಗ್ರಾಹಕ' ಪ್ರಶಸ್ತಿ ಲಭಿಸಿದೆ.

ಬೆಂಗಳೂರಿನ ಬಿಜಿಎಸ್ ನ್ಯಾಷನಲ್ ಪಬ್ಲಿಕ್ ಶಾಲೆಯಲ್ಲಿ ಐದನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯುನ್ ಹೆಬ್ಬಾರ್, ಛಾಯಾಗ್ರಹಣ ಲೋಕಕ್ಕೆ ತೆರೆದುಕೊಂಡಿದ್ದು ಆಕಸ್ಮಿಕವೇನಲ್ಲ. ಮೂರನೇ ವಯಸ್ಸಿಗೇ ವಿದ್ಯುನ್‌ಗೆ ಕ್ಯಾಮೆರಾ ಜೊತೆಯಾಗಿತ್ತು. ಶೃಂಗೇರಿ ಮೂಲದ, ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ರವಿಶಂಕರ್ ಎಸ್.ಎಸ್. ಹಾಗೂ ನಮಿತಾ ಅವರ ಮಗನಾದ